**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್. 64/2013**

ಸಾಕ್ಷಿಯನ್ನು ದಿಃ **03.01.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ಶ್ರೀ**. CMG **ವಕೀಲರಿಂದ**:

ನಾನು ಎಂ.ಎ ಓದಿದ್ದೇನೆ. ನಾನು 1976ರಲ್ಲಿ 1ನೇ ಪ್ರತಿವಾದಿಯನ್ನು ಮದುವೆಯಾಗಿ ಬೂದನೂರಿಗೆ ಬಂದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮಂಡ್ಯಕ್ಕೆ ಬಂದೆ ಎಂದು ನುಡಿಯುತ್ತಾರೆ. ನನ್ನ ಮಾವ ಪೇಟಯ್ಯ ಹಾಗೂ ಅವರ ತಂದೆ ಮೂಲತಃ ವ್ಯವಸಾಯಗಾರರು ಎಂದರೆ ಸರಿ. ಪೇಟಯ್ಯರವರು ತಮ್ಮ ಮಕ್ಕಳಿಗೆ ವೈದ್ಯಕೀಯ ವಿದ್ಯಾಭ್ಯಾಸ, ಇಂಜಿನಿಯರಿಂಗ್ ಹಾಗೂ ಪದವಿ ವಿದ್ಯಾಭ್ಯಾಸವನ್ನು ಕೊಡಿಸಿ ಅವರೇ ಮದುವೆ ಮಾಡಿಸಿದ್ದಾರೆ ಎಂದರೆ ಸರಿ. ನಾನು ಮದುವೆಯಾಗಿ ಬರುವಷ್ಟು ಹೊತ್ತಿಗೆ ವಾದಿಯ ಗಂಡನ ಅಮೇರಿಕಕ್ಕೆ ಹೋಗಿ ಅಲ್ಲಿಯೇ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನಗೆ ಮದುವೆಯಾಗುವಷ್ಟರಲ್ಲಿ 4ನೇ ಪ್ರತಿವಾದಿ ಕೂಡ ಅಮೇರಿಕಾದಲ್ಲಿ ಕೆಲಸ ಮಾಡುತಿದ್ದರು ಎಂದರೆ ಸರಿ. ವಾದಿಯ ಗಂಡ ಮತ್ತು 4ನೇ ಪ್ರತಿವಾದಿ ಅಮೇರಿಕಾದಲ್ಲಿ ಕೆಲಸ ಮಾಡುತ್ತಿದ್ದಾಗ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನನ್ನ ಮಾವ ಪೇಟಯ್ಯ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಮನೆಯ ಎಲ್ಲಾ ಪೂಜಾ ಕಾರ್ಯಕ್ರಮಗಳನ್ನು ಹಾಗೂ ಪೇಟಯ್ಯರವರ ಮಕ್ಕಳ ಮದುವೆಯ ಸಮಯದಲ್ಲಿ ಕುಟುಂಬದ ಎಲ್ಲಾ ಸದಸ್ಯರು ಸೇರಿ ಮಾಡುತ್ತಿದ್ದೇವು ಎಂದರೆ ಅವರು ಕೆಲವೊಮ್ಮೆ ಬರುತ್ತಿದ್ದರು. ಕೆಲವೊಮ್ಮೆ ನಾವೇ ಮಾಡುತ್ತಿದ್ದೇವು.

ನನ್ನ ಮಾವ ಪೇಟಯ್ಯರ ವರು ಮೊದಲಿಗೆ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಸಾಮಾನ್ಯ ನೌಕರನಾಗಿ ಸೇರಿ ನಂತರ cane supervisor ಆಗಿ ನಿವೃತ್ತಿಯಾದರು ಎಂದರೆ ಸರಿ. ನನ್ನ ಮಾವ ಪೇಟಯ್ಯರವರು 1976ರಿಂದ 1995ರಲ್ಲಿ ಅವರು ತೀರಿ ಹೋಗುವವರೆಗೆ ನಮ್ಮ ಜೊತೆಯೇ ವಾಸವಿದ್ದು, ನಾವೇ ಅವರ ಪಾಲನೆ ಪೋಷಣೆ ಮಾಡಿದ್ದೇವೆ ಎಂದರೆ ಸರಿ. ವಾದಿ, ಅವರ ಗಂಡ ಮತ್ತು 4ನೇ ಪ್ರತಿವಾದಿ ಅಮೇರಿಕಾದಿಂದ ಬಂದಾಗ ನಮ್ಮ ಮನೆಯಲ್ಲಿಯೇ ವಾಸವಿದ್ದು ನಾವೇ ಅವರನ್ನು ನೋಡಿಕೊಳ್ಳುತ್ತಿದ್ದೇವು ಎಂದರೆ ಸರಿ. ವಾದಿ ಪ್ರಬಾ ಬೂದನೂರು ಮತ್ತು ಬಿ.ಪಿ ಮಹೇಂದ್ರ ಬೂದನೂರು ರವರಿಗೆ ಒಬ್ಬಳೇ ಮಗಳು ಎಂದರೆ ಸರಿ. ಆಕೆ ಅಮೇರಿಕಾದಿಂದ ಬಂದಾಗ ಆಕೆಯನ್ನು ನಾನು

ಮಗಳಂತೆಯೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ಪೇಟಯ್ಯರವರು ತೀರಿಕೊಂಡಾಗ ಅವರ ಎಲ್ಲಾ ಕಾರ್ಯಕ್ರಮಗಳನ್ನು ವಾದಿ, ಅವರ ಗಂಡ, 4ನೇ ಪ್ರತಿವಾದಿ ಮತ್ತು ಪೇಟಯ್ಯರವರ ಉಳಿದ ಎಲ್ಲಾ ಮಕ್ಕಳು ಸೇರಿಯೇ ಮಾಡಿದ್ದೇವೆ ಎಂದರೆ ಸರಿಯಲ್ಲ. ಅಮೇರಿಕಾದಿಂದ ಯಾರು ಬರಲಿಲ್ಲ. ಪೇಟಯ್ಯರವರ ಎಲ್ಲಾ ಮಕ್ಕಳ ಮಧ್ಯೆ ಇಲ್ಲಿಯವರೆಗೂ ಯಾವುದೇ ವಿಭಾಗ ಆಗಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಪೇಟಯ್ಯರವರು ಯಾವುದೇ ಆಸ್ತಿಯನ್ನು ಬಿಟ್ಟು ಹೋಗಿಲ್ಲ ಎಲ್ಲವೂ ನನ್ನ ಗಂಡನ ಸ್ವಯಾರ್ಜಿತ ಆಸ್ತಿಯಾಗಿದೆ ಎಂದು ಉತ್ತರ ನೀಡುತ್ತಾರೆ. ನನಗೆ ಮದುವೆಯಾದಾಗ ನನ್ನ ತಂದೆ ನನ್ನ ಗಂಡನಿಗಾಗಲೀ, ಮಾವನಿಗಾಗಲೀ, ನನಗಾಗಲೀ ಚೆಕ್ ಅಥವಾ ಡಿಡಿ ರೂಪದಲ್ಲಿ ಹಣ ಕೊಟ್ಟಿಲ್ಲ. ಸಾಕ್ಷಿ ಮುಂದುವರಿದು ನಗದಾಗಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಗದಾಗಿ ಯಾರು, ಯಾರಿಗೆ, ಯಾವ ಮೂಲಕ, ಯಾವಾಗ ಕೊಟ್ಟಿದ್ದಾರೆ ಎಂದರೆ ಅದೆಲ್ಲಾ ನನಗೆ ನೆನಪಿಲ್ಲ.

ದಾವಾ ಐಟಂ ನಂ.3ರ ಸಂಖ್ಯೆ ಗೊತ್ತಿಲ್ಲ. ಅದರ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಐಟಂ ನಂ.3ನ್ನು ಯಾವ ವರ್ಷದಲ್ಲಿ ಖರೀದಿಸಲಾಗಿದೆ ಎಂದು ನೆನಪಿಲ್ಲ. ಅದನ್ನು ಯಾರು ಕ್ರಯಕ್ಕೆ ಮಾತನಾಡಿದರು ಮತ್ತು ಯಾರಿಂದ ಕ್ರಯಕ್ಕೆ ಕೊಂಡುಕೊಳ್ಳಲಾಗಿದೆ ಎಂದು ಗೊತ್ತಿಲ್ಲ. ಸದರಿ ಕ್ರಯ ಪತ್ರ ಯಾವಾಗ ನೋಂದಣಿಯಾಯಿತು, ಅದರ ಕ್ರಯದ ಪ್ರತಿಫಲ ಎಷ್ಟು, ಸಾಕ್ಷಿದಾರರು ಯಾರು ಮತ್ತು ಬರೆದರು ಯಾರು ಎಂದು ಗೊತ್ತಿಲ್ಲ. ಅದರ ಖಾತೆ ಮಾಡಲು ಅರ್ಜಿ ಕೊಟ್ಟವರು ಯಾರು ಮತ್ತು ಯಾವಾಗ ಖಾತೆ ಆಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.3ನ್ನು ಖರೀದಿಸುವ ಕಾಲಕ್ಕೆ ಸಂಪೂರ್ಣ ಸರ್ವೇ ನಂಬರ್ ಆಗಿತ್ತೆ, ಪೋಡಾಗಿತ್ತೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಗೊತ್ತಿದ್ದೆ. ನಾನು ಯಾವತ್ತು ಕೂಡ ದಾವಾ ಐಟಂ ನಂ.3ರ ಬಗ್ಗೆ ಸ್ವತಃ ಕಂದಾಯ ಕಟ್ಟಿಲ್ಲ ಮತ್ತು ರಶೀದಿಯನ್ನು ಪಡೆದುಕೊಂಡಿಲ್ಲ. ದಾವಾ ಐಟಂ ನಂ.8 ಮತ್ತು 9ರ ಕ್ರಯ ಪತ್ರ ಯಾವಾಗ ನೊಂದಣಿಯಾಯಿತು, ಕ್ರಯದ ಪ್ರತಿಫಲ ಎಷ್ಟು, ಸಾಕ್ಷಿದಾರರು ಮತ್ತು ಬರೆದವರು ಯಾರು, ಅದರ ಸಂಖ್ಯೆ ಎಷ್ಟು, ಸಂಪೂರ್ಣ ಸರ್ವೆ ನಂಬರೇ ಅಥವಾ ಪೋಡಾಗಿತ್ತೆ ಎಂಬ ಮಾಹಿತಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಹಣ ಕೊಟ್ಟ ಬಗ್ಗೆ ಮಾತ್ರ ಗೊತ್ತಿದೆ. ದಾವಾ ಐಟಂ ನಂ.3, 8 ಮತ್ತು 9 ಗ್ರಾಮ ಪಂಚಾಯ್ತಿ ವ್ಯಾಪ್ತಿ ಅಥವಾ ಪುರಸಭೆ ವ್ಯಾಪ್ತಿಗೆ ಬರುತ್ತದೆಯೇ ಇಲ್ಲವೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.3, 8 ಮತ್ತು 9ನ್ನು ಖರೀದಿಸುವ ಕಾಲಕ್ಕೆ ನನ್ನ ಬ್ಯಾಂಕ್ ಖಾತೆಯಲ್ಲಿ ಹಣ ಇತ್ತು ಎಂದು ತೋರಿಸಲು ದಾಖಲೆ ಇಲ್ಲ. 1988 ರಿಂದ ಈಚೆಗೆ ದಾವಾ ಐಟಂ ನಂ.3 , 8 ಮತ್ತು 9 ರಿಂದ ಆದಾಯ ಬಂದ ಬಗ್ಗೆ ಯಾವುದೇ ಆದಾಯ ತೆರಿಗೆ ಪಾವತಿಸಿದ ಬಗ್ಗೆ ದಾಖಲೆ ಇಲ್ಲ. ದಾವಾ ಐಟಂ ನಂ.5 ಹೊಂಬಾಳಮ್ಮರವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಪೇಟಯ್ಯ ಮತ್ತು ಹೊಂಬಾಳಮ್ಮ ಬದುಕಿದ್ದಾಗ ದಾವಾ ಐಟಂ ನಂ.5ರ ಬಗ್ಗೆ ಕೋರ್ಟ್ ಡಿಕ್ರಿಯಾಗಲೀ, ವಿಭಾಗ ಆಗಿದ್ದಾಗಲೀ ಇಲ್ಲ. ದಾವಾ ಐಟಂ ನಂ.5 ನ್ನು ಯಾರು, ಯಾವಾಗ ಮಾರಾಟ ಮಾಡಿದರು ಎಂದು ನನಗೆ ಖುದ್ದು ಮಾಹಿತಿ ಇಲ್ಲ. ನನ್ನ ಗಂಡ 1ನೇ ಪ್ರತಿವಾದಿಯನ್ನು ಅವರ ಸಹೋದರರು ಪ್ರೀತಿಯಿಂದ ಬಾಬು ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ಮಗನ ಹೆಸರು ಮನ್ವಂತ್ ನನ್ನ ಮಗನನ್ನು ನನ್ನ ಗಂಡನ ಸಹೋದರರು ಪ್ರೀತಿಯಿಂದ ಮನು ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ಮಗ ಮತ್ತು 1ನೇ ಪ್ರತಿವಾದಿ ಇಲ್ಲಿಯವರೆಗೆ ಅಮೇರಿಕಾಕ್ಕೆ ಹೋಗಿಲ್ಲ. ನನ್ನ ಗಂಡ 1ನೇ ಪ್ರತಿವಾದಿ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿರುವ State Bank of Mysore ನಲ್ಲಿ ಬ್ಯಾಂಕ್ ಖಾತೆ ಹೊಂದಿದ್ದರು ಎಂದರೆ ಗೊತ್ತಿಲ್ಲ. ನನ್ನ ಗಂಡನಿಗೆ State Bank of Mysore ಮಂಡ್ಯ ಶಾಖೆಯಲ್ಲಿ ಖಾತೆ ಇತ್ತು ಎಂದರೆ ಸರಿ. ವ್ಯವಹಾರಕ್ಕೆ ಬೇಕಾಗಿತ್ತು. Hombale email ಯಾರದ್ದು ಎಂದು ಗೊತ್ತಿಲ್ಲ. ನನ್ನ ಅತ್ತೆ ಹೊಂಬಾಳಮ್ಮ ತೀರಿಕೊಂಡ ನಂತರ ಅವರ ಹೆಸರಿನಲ್ಲಿ e–mail ಖಾತೆ ತೆರೆಯಲಾಗಿತ್ತು ಎಂದರೆ ಇಲ್ಲ. ನನ್ನ ಗಂಡ ಮತ್ತು ಮಗನ ಹೆಸರಿನಲ್ಲಿರುವ e–mail ಖಾತೆಯ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಬಳಿ, 1ನೇ ಪ್ರತಿವಾದಿ ಮತ್ತು ಮಗನ ಬಳಿ ಮೊಬೈಲ್ ಇದೆ. ನಾವೆಲ್ಲರೂ ವಾದಿಯ ಗಂಡ ಮತ್ತು 4ನೇ ಪ್ರತಿವಾದಿಯ ಜೊತೆ ಆಗಾಗ್ಗೆ ಸಂಪರ್ಕ ಮಾಡುತ್ತಿದ್ದೆವು ಎಂದರೆ ಇಲ್ಲ. ಸಾಕ್ಷಿಗೆ ಒಂದು ಪತ್ರದ ನಕಲು ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯು ತನ್ನ ಕೈ ಬರಹದಲ್ಲಿದೆ ಎಂದು ಒಪ್ಪಿಕೊಳ್ಳುತ್ತಾರೆ. ***(ಈ ಹಂತದಲ್ಲಿ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲು ವಾದಿ ಪರ ವಕೀಲರು ಕೇಳಿಕೊಂಡಿದ್ದು, ಸದರಿ ದಾಖಲೆ ನಕಲು ಪ್ರತಿಯಾಗಿರುವ ಕಾರಣ ನಿಶಾನೆಯಾಗಿ ಗುರುತಿಸಿಕೊಳ್ಳಲು ಅವಕಾಶ ಇಲ್ಲದೇ ಇರುವುದರಿಂದ ವಾದಿ ಪರ ವಕೀಲರು ಮಾಡಿದ ಕೋರಿಕೆಯನ್ನು ತಳ್ಳಿಹಾಕಲಾಯಿತು.) (ಈ ಹಂತದಲ್ಲಿ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಳ್ಳುವ ಬಗ್ಗೆ ವಾದಿ ಪರ ವಕೀಲರು ಸೂಕ್ತ ವಾದವನ್ನು ಮಂಡಿಸುವುದಾಗಿ ಹೇಳಿರುವುದರಿಂದ ಸದರಿದ ದಾಖಲೆಯನ್ನು ನ್ಯಾಯಾಲಯದ ಕಡತಕ್ಕೆ ತೆಗೆದುಕೊಳ್ಳಲಾಯಿತು. ಹಾಗೂ ಈ ಬಗ್ಗೆ ವಾದವನ್ನು ಮಂಡಿಸಲು ವಾದಿ ಪರ ವಕೀಲರಿಗೆ ಅನುಮತಿಯನ್ನು ತೆರೆದಿಡಲಾಗಿದೆ).***

ಸಾಕ್ಷಿಗೆ ಒಂದು ಇ-ಮೇಲ್ ದಾಖಲೆಯನ್ನು ತೋರಿಸಲಾಗಿ ಸದರಿ ಇ-ಮೇಲನ್ನು ಮಹೇಂದ್ರ ಬೂದನೂರು ರವರು ನನ್ನ ಮಗನಿಗೆ ದಿಃ 05.02.2003 ರಂದು ಬರೆದಿರುವುದಾಗಿ ಸದರಿ ದಾಖಲೆಯಲ್ಲಿ ಕಂಡು ಬರುತ್ತದೆ ಎಂದು ಹಾಗೂ ಆ ಇ-ಮೇಲ್ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ಇ-ಮೇಲ್ ದಾಖಲೆಯನ್ನು ತೋರಿಸಲಾಗಿ ಸದರಿ ಇ-ಮೇಲನ್ನು ನನ್ನ ಗಂಡ ವಾದಿಯ ಗಂಡನಿಗೆ ದಿಃ 10.12.2004 ರಂದು ಬರೆದಿರುವುದಾಗಿ ಸದರಿ ದಾಖಲೆಯಲ್ಲಿ ಕಂಡು ಬರುತ್ತದೆ ಎಂದು ಹಾಗೂ ಆ ಇ-ಮೇಲ್ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಇನ್ನೊಂದು ಇ-ಮೇಲ್ ದಾಖಲೆಯನ್ನು ತೋರಿಸಲಾಗಿ ಸದರಿ ಇ-ಮೇಲನ್ನು ನನ್ನ ಗಂಡ ವಾದಿಯ ಗಂಡನಿಗೆ ದಿಃ 02.02.2003 ರಂದು ಬರೆದಿರುವುದಾಗಿ ಸದರಿ ದಾಖಲೆಯಲ್ಲಿ ಕಂಡು ಬರುತ್ತದೆ ಎಂದು ಹಾಗೂ ಆ ಇ-ಮೇಲ್ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ಇ-ಮೇಲ್ ದಾಖಲೆಯನ್ನು ತೋರಿಸಲಾಗಿ ಸದರಿ ಇ-ಮೇಲನ್ನು ನನ್ನ ಗಂಡ ವಾದಿಯ ಗಂಡನಿಗೆ ದಿಃ 04.10.2004 ರಂದು ಬರೆದಿರುವುದಾಗಿ ಸದರಿ ದಾಖಲೆಯಲ್ಲಿ ಕಂಡು ಬರುತ್ತದೆ ಎಂದು ಹಾಗೂ ಆ ಇ-ಮೇಲ್ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.